**ಸಾಕ್ಷಿಯನ್ನು ದಿಃ 04-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪ್ರಮಾಣೀಕೃತ ಹೇಳಿಕೆಃ ದೂರುದಾರರ ಪರ ವಕೀಲರಿಂದಃ**

ನನ್ನ ಪ್ರಮಾಣ ಪೂರ್ವ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿ ಮತ್ತು ಸರಿಯಾಗಿರುತ್ತವೆ. ಅದರಲ್ಲಿ ಕಂಡು ಬರುವ ಸಹಿ ನನ್ನದೇ ಇರುತ್ತದೆ.

ನಾನು ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

(1) ಜಿ.ಪಿ.ಎ. ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು.

(2) ಆರೋಪಿಯು ನೀಡಿದ ಚೆಕ್ ಸಂಖ್ಯೆ **001958** ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು. ನಿ ಪಿ 2 ರ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು.

(3) ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು.

(4) ಆರೋಪಿಯು ನೀಡಿದ ಚೆಕ್ ಸಂಖ್ಯೆ **001959** ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 4 ಎಂದು ಗುರುತಿಸಲಾಯಿತು. ನಿ ಪಿ 4 ರ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

(5) ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 5 ಎಂದು ಗುರುತಿಸಲಾಯಿತು.

(6) ಆರೋಪಿಯು ನೀಡಿದ ಚೆಕ್ ಸಂಖ್ಯೆ **001960** ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. ನಿ ಪಿ 6 ರ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು.

(7) ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 7 ಎಂದು ಗುರುತಿಸಲಾಯಿತು.

(8) ಬ್ಯಾಂಕಿನ ಮೂರು (3) ರಸೀತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ ಪಿ 8 ರಿಂದ ನಿ ಪಿ 10 ಎಂದು ಗುರುತಿಸಲಾಯಿತು.

(9) ವಕೀಲರ ಮುಖಾಂತರ ಆರೋಪಿಗೆ ಕಳುಹಿಸಿದ ಎರಡು (2) ನೋಟೀಸಿನ ಕಛೇರಿ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ ಪಿ 11 ಮತ್ತು ನಿ ಪಿ 12 ಎಂದು ಗುರುತಿಸಲಾಯಿತು.

(10) ಎರಡು (2) ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ ಪಿ 13 ಮತ್ತು ನಿ ಪಿ 14 ಎಂದು ಗುರುತಿಸಲಾಯಿತು.

(11) ಎರಡು(2) ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ ಪಿ 15 ಮತ್ತು ನಿ ಪಿ 16 ಎಂದು ಗುರುತಿಸಲಾಯಿತು.

(12) ಟ್ಯಾಕ್ಸ್ ಇನ್ ವೈಸ್‌ನ್ನು ಹಾಜರುಪಡಿಸಿದ್ದು , ಅದನ್ನು ನಿ ಪಿ 17 ಎಂದು ಗುರುತಿಸಲಾಯಿತು.

**ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಹರೀಶ್ ಸಿಂಗ್.ಹೆಚ್.ಜಿ)**
2 ನೇ ಅಪರ ಸಿವಿಲ್ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ.**